ಶ್ರೀ ಕಾಗೋಡು ತಿಮ್ಮಪ್ಪ.—ರೆವಿ ಪ್ರೊಕ್ಯೂರಮೆಂಟ್ ರೇಟ್ ಖಂಡಿತ ಆಗುವುದಿಲ್ಲ, ನೀವು ಫೆಬ್ರುವರಿವರೆಗೆ ಕಾಯ್ದರೆ ರೆವಿ ಪೊಸಿಷನ್ ಗೊತ್ತಾಗುತ್ತದೆ. ಸರ್ಕಾರದಲ್ಲಿ ಪಡಿತರ ಸ್ಟಾಕ್ ಇದ್ದರೆ ಮಾರ್ಕೆಟ್ ಮೇಲೆ ಪರಿಣಾಮವಾಗುತ್ತದೆ. ಶಿವಮೊಗ್ಗದಿಂದ ಪರ್ಮಿಟ್ ಸಿಸ್ಟಂ ಮೇಲೆ ಯಾವ ಯಾವ ಕಡೆಗೆ ಎಷ್ಟೆಷ್ಟು ಅಕ್ಕಿ ಹೋಗುತ್ತದೆಂದು ತೀರ್ಮಾನ ತೆಗೆದುಕೊಂಡ ಮಾರನೇ ದಿವಸವೇ ಶಿವಮೊಗ್ಗ, ಸಾಗರ, ಮಂಡ್ಯ ಮಾರ್ಕೆಟ್‌ಗಳಲ್ಲಿ ಕೇಳಿದರೆ 20 ರೂಪಾಯಿ ಜಾಸ್ತಿ ಯಾಗಿರುತ್ತದೆ

ತೀರ್ಮಾನ ಮಾಡಿದ ಕೂಡಲೇ ಕೆಲವರು ಮಿರ್ ಮಾಲೀಕರು ಹಾಗೂ ವ್ಯಾಪಾರ ಮಾಡತಕ್ಕ ಜನ ಸೇರಿ ಈಗ ಇದ್ದಂತಹ ರೇಟನ್ನು ಜಾಸ್ತಿ ಮಾಡಿದ್ದಾರೆ. ಕಳೆದ ಒಂದು ತಿಂಗಳು ಹಾಗೂ 15 ದಿವಸದಿಂದ ಈಚೆಗೆ ಶಿವಮೊಗ್ಗ ಮಾರ್ಕೆಟ್ಟಿನಲ್ಲಿ ರೇಟ್ ಎಷ್ಟು ಜಾಸ್ತಿಯಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಿ ಆ ಮೇಲೆ ವಿಚಾರ ಮಾಡಿ.

ಶ್ರೀಮತಿ ಇ. ಇ. ವಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ತಿಳಿಸಬೇಕಾದರೆ ಶಿವಮೊಗ್ಗದಿಂದ ಕೆಲವರು ರೈತರು ಬಂದು ಬೇಗ ಕೊಂಡುಕೊಳ್ಳುವುದಕ್ಕೆ ಏರ್ಪಾಡು ಮಾಡ ಬೇಕೆಂದು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ,—ಅವರು ರೈತರು ಅಲ್ಲ; ಮಿರ್ ಮಾಲೀಕರು.

ಶ್ರೀ ಸಿ. ಬೈರೇಗೌಡ.—ಯಾವ ರೇಟಿಗೆ ಯಾವ ಕ್ಯಾಂಟಿಟಿ ಕೊಂಡುಕೊಳ್ಳಬೇಕೆಂದು ತೀರ್ಮಾನವಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ.—ರೇಟ್ ಹೇಳಿ.

ಶ್ರೀಮತಿ ಇ. ಇ. ವಾಜ್.—ಸರ್ಕಾರಕ್ಕೆ ರಾಭದ ದೃಷ್ಟಿಯೇನೂ ಇಲ್ಲ. ಹೋಲ್ಡಿಂಗ್ ಕಾಸ್ಟ್ ಏನು ಇದೆ. ಅದನ್ನು ಕೊಟ್ಟು ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ,—ಅಧ್ಯಕ್ಷರೇ, ನಾವು ಯಾವತ್ತೂ ಬತ್ತ ಕೊಳ್ಳುವವರಲ್ಲ; ಈ ಸಾರಿ ಮಲೆನಾಡಿನಲ್ಲಿಯೂ ಬೆಳೆಯಾಗದೇ ಬತ್ತ ಕೊಳ್ಳುವ ಪರಿಸ್ಥಿತಿ ಬಂದಿದೆ; ಇವರು ನೋಡಿದರೆ ಕಥೆ ಹೇಳುತ್ತಿದ್ದಾರೆ.

Re : Promise of Payment of a month's salary as bonus to the staff of the Legislature secretariat.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಹೇಳುವುದು ಮಂತ್ರಿಯವರು ಪರಿಶೀಲನೆ ಮಾಡಿದರೆ ಚನ್ನಾಗಿ ಕಾಣುತ್ತದೆಂದು ಹೇಳುತ್ತೇನೆ. ಅಧ್ಯಕ್ಷರೇ, ಮಾನ್ಯ ಕೃಷ್ಣರವರು ಬಂದಿದ್ದಾರೆ; ನಿನ್ನೆ ಕೂಡ ಈ ಪ್ರಶ್ನೆ ಎತ್ತಿದೆ. ಈ ಮನೆಯಲ್ಲಿ ಮಾನ್ಯ ಕೃಷ್ಣರವರು ಭರವಸೆ ಕೊಟ್ಟಿದ್ದಾರೆ; ಏನು ಎಂದರೆ ರೆಜಿಸ್ಟ್ರೇಟರ್ಸ್ ಸೆಕ್ರೆಟೇರಿಯೇಟ್‌ನ ರಿಪೋರ್ಟರ್ಸ್‌ಗೂ ಹಾಗೂ ಸಿಬ್ಬಂದಿಗೆ ಒಂದು ತಿಂಗಳ ಸಂಬಳ ಕೊಡುತ್ತೇವೆಂದು ಒಪ್ಪಿಕೊಂಡಿದ್ದರು, ಈ ವಿಚಾರದಲ್ಲಿ ಎರಡು ಸಲ ಪ್ರಶ್ನೆ ಮಾಡಿದ್ದಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರೂ ಇದುವರೆಗೂ ಸಹ ಕಾರ್ಯಗತಕ್ಕೆ ಬಂದಿಲ್ಲ; ಯಾರು ಎಲ್ಲಿ ಕೊಕ್ಕೆ ಹಾಕಿದ್ದಾರೋ ಗೊತ್ತಿಲ್ಲ ಬಜೆಟ್ ಅಧಿವೇಶನದಲ್ಲಿ ಹೆಚ್ಚಿನ ಸಮಯ ಕೆಲಸ ಮಾಡಿದ್ದಕ್ಕೆ ಒಂದು ತಿಂಗಳ ಸಂಬಳ ಕೊಡುತ್ತೇವೆಂದು ಮೇ ತಿಂಗಳಲ್ಲಿ ಹೇಳಿದರು. ಆದರು ಕೊಟ್ಟಂತಹ ಭರವಸೆಯನ್ನು ಕಾರ್ಯಗತ ಮಾಡಲಿಲ್ಲ. ಏತ ಕೋನ್ಸ್ಕರ ಮಾಡಲಿಲ್ಲ; ಕೊಡುವುದಕ್ಕೆ ಆಗದೇ ಹೋದರೆ ಏನು ತಕರಾರು ಇದೆ ಎಂಬುದನ್ನಾದರೂ ಹೇಳಲಿ.

ಶ್ರೀ ಎಸ್. ಎಂ. ಕೃಷ್ಣ.—ಕೊಡಬೇಕು ಕೊಡುತ್ತೇವೆ.